ಅನುಭವ

# ಮಕ್ಕಳು ಗಿಡವನ್ನು ನೆಡುತ್ತಾ, ಅಮೂಲ್ಯ ಪಾಠವನ್ನು ಕಲಿತರು

ಶುಚಿ ದುಬೆ

ಹಲವಾರು ವರ್ಷಗಳಿಂದ ಪ್ರಕೃತಿಯನ್ನು ಅವಿವೇಕತನದಿಂದ ಶೋಷಣೆಗೈಯುತ್ತ ಬಂದಿರುವುದರ ಪರಿಣಾಮವಾಗಿ ಭೂಮಿಯ ಮೇಲೆ ಪರಿಸರದ ವಿಷಯದಲ್ಲಿ ಅಸಮತೋಲನದ ಸ್ಥಿತಿಯುಂಟಾಗಿದೆ. ಆದ್ದರಿಂದ ಪರಿಸರದ ರಕ್ಷಣೆ ಮತ್ತು ಸಂರಕ್ಷಣೆಗಳು ಅತ್ಯಂತ ಮುಖ್ಯವಾಗಿ ಪರಿಗಣಿಸಬೇಕಾದ ಸಂಗತಿಗಳಾಗಿದ್ದಾಗಲೂ ನಮಗೆ ವಿಚಾರ ಸಂಕಿರಣ, ಭಾಷಣ, ಘೋಷಣೆಗಳಿಂದಾಚೆಗೆ ಎದ್ದು ನಿಲ್ಲಲು ಸಾಧ್ಯವಾಗಿಲ್ಲ ಮತ್ತು ಪರಿಸರವು ನಾಶವಾಗುತ್ತಿರುವುದರ ಪರಿಣಾಮವನ್ನು ಅನುಭವಿಸುತ್ತಲೇ ಇದ್ದೇವೆ. ಪರಿಸರಕ್ಕೆ ಸಂಬಂಧಿಸಿದ ಎಲ್ಲ ವಿಷಯಗಳನ್ನೂ ಅದರ ರಕ್ಷಣೆಯೊಡನೆ ಸಂಯೋಜಿಸುವುದು ಮುಖ್ಯ. ಎಲ್ಲಾ ವಯೋಮಾನದ ಜನರು, ವಿಶೇಷವಾಗಿ ಮಕ್ಕಳಲ್ಲಿ ಪರಿಸರ ಸಂರಕ್ಷಣೆಯ ಪ್ರಾಮುಖ್ಯತೆಯ ಬಗ್ಗೆ ಅರಿವು ಮೂಡುವವರೆಗೂ ಮತ್ತು ಅವರು ಅದರಲ್ಲಿ ತೊಡಗಿ–ಕೊಳ್ಳುವವರೆಗೂ ನಾವು ಈ ಸಮಸ್ಯೆಯೊಡನೆ ನಿರಂತರವಾಗಿ ಹೋರಾಡಬೇಕಿದೆ. ಪರಿಸರದ ರಕ್ಷಣೆಯನ್ನು ಪ್ರಾಥಮಿಕ ತರಗತಿಗಳಲ್ಲಿ ಚಟುವಟಿಕೆ – ಆಧಾರಿತ ಬೋಧನೆಯಲ್ಲಿ ಸೇರಿಸಬೇಕು. ಮಕ್ಕಳಿಗೆ ಪರಿಸರದ ಬಗ್ಗೆ ಅವರ ಪ್ರಥಮ ಭಾಷೆಯಲ್ಲಿಯೇ ಸರಳ ಶಬ್ದಗಳಲ್ಲಿ ತಿಳಿಸಿಕೊಡಬೇಕು. ಅದಕ್ಕಾಗಿ, ಸುತ್ತಮುತ್ತಲಿನ ಪರಿಸರದೊಡನೆ ಅವರನ್ನು ಬೆಸೆಯುವ ಮೂಲಕ, ತರಗತಿ ಕೋಣೆಯಲ್ಲಿನ ಚಟುವಟಿಕೆಗಳು ಮತ್ತು ತರಗತಿ ಕೋಣೆಯ ಹೊರಗಿನ ಪ್ರಕ್ರಿಯೆಗಳ ಮೂಲಕ ಅವರಲ್ಲಿ ಪರಿಸರ ಸಂಬಂಧಿ ಅರಿವನ್ನು ಪರಿಕಲ್ಪನಾತ್ಮಕ ಮಟ್ಟದಲ್ಲಿ ಬೆಳೆಸಬೇಕು.

## ಪ್ರಾಯೋಗಿಕ ಆಲೋಚನೆಗಳು

ಹಿರಿಯ ಪ್ರಾಥಮಿಕ ಶಾಲೆಯೊಂದರಲ್ಲಿ ಶಿಕ್ಷಕರು, ಮಕ್ಕಳೊಡನೆ ಸೇರಿಕೊಂಡು ಶಾಲೆಯ ಆವರಣದಲ್ಲಿ, ಹಳ್ಳಿಯಲ್ಲಿ ಹಾಗೂ ಸುತ್ತಮುತ್ತಲಿನ ಮರಗಿಡಗಳಿಲ್ಲದ ಗುಡ್ಡಬೆಟ್ಟಗಳಲ್ಲಿ ಸಸಿಗಳನ್ನು ನೆಟ್ಟರು. ತಮ್ಮ ದೈನಂದಿನ ಚಟುವಟಿಕೆಗಳ ಭಾಗವಾಗಿ ಅವುಗಳಿಗೆ ನೀರುಣಿಸಿದರು, ಗೊಬ್ಬರ ಹಾಕಿದರು. ಆ ಮೂಲಕ ನಮ್ಮ ಬದುಕಿನಲ್ಲಿ ಮರಗಿಡಗಳ ಮಹತ್ವ ಏನು ಎಂಬುದನ್ನು ಅರ್ಥಮಾಡಿಕೊಂಡರು. ಈ ಕೆಲಸವನ್ನು ಆರಂಭಿಸಲು ಬೇಕಾದ ಸಿದ್ಧತೆಗೆ ಹಲವಾರು ತಿಂಗಳುಗಳು ಹಿಡಿದವು. ಇದನ್ನು ಆರಂಭಿಸುವುದಕ್ಕೂ ಮೊದಲು ಶಾಲೆಯು ಈ ಕಾರ್ಯವನ್ನು ಮುಂದುವರಿಸುವಂತಹ ಅನೇಕ ಚಟುವಟಿಕೆಗಳನ್ನು ಮಕ್ಕಳೊಡನೆ ಹಮ್ಮಿಕೊಂಡಿತ್ತು. ಮಳೆಗಾಲದ ಅವಧಿಯಲ್ಲಿ ಶಿಕ್ಷಕರು ಮಕ್ಕಳೊಂದಿಗೆ ಶಾಲೆಯ ಆವರಣದಲ್ಲಿ ಗಿಡಗಳನ್ನು ನೆಟ್ಟರು. ಆ ದಿನ ಸಮಾರಂಭವೊಂದನ್ನು ಆಯೋಜಿಸಲಾಗಿತ್ತು. ಗಿಡ ನೆಡುವ ಸಮಾರಂಭಕ್ಕೆ ಶಿಕ್ಷಣ ಇಲಾಖೆಯ ಅಧಿಕಾರಿಗಳನ್ನು ಮತ್ತು ಸ್ಥಳೀಯ ಜನಪ್ರತಿನಿಧಿಗಳನ್ನು ಕೂಡ ಆಹ್ವಾನಿಸಲಾಗಿತ್ತು. ಕೆಲವು ತಿಂಗಳುಗಳ ಕಾಲ ಈ ಗಿಡಗಳು ಚೆನ್ನಾಗಿ ಬೆಳೆದವು. ಆದರೆ ಚಳಿಗಾಲದ ರಜೆಯಲ್ಲಿ ಹದಿನೈದು ದಿನ ಅವುಗಳಿಗೆ ನೀರು ಹಾಕದಿದ್ದಾಗ, ಎಲ್ಲಾ ಗಿಡಗಳೂ ನಾಶವಾದವು. ಇದರಿಂದ, ಪರಿಸರ ಸಂರಕ್ಷಣೆಯ ಕುರಿತಾದ ಕರ್ತವ್ಯಗಳು ಕೇವಲ ಗಿಡಗಳನ್ನು ನೆಡುವುದರಿಂದ ಮಾತ್ರ ಈಡೇರಲ್ಲ ಎನ್ನುವ ಸಂಗತಿಯು ಮನದಟ್ಟಾಯಿತು.

1. ಮುಂದಿನ ಮಳೆಗಾಲದಲ್ಲಿ ತಮ್ಮ ಆವರಣದಲ್ಲಿ ಗಿಡಗಳನ್ನು ನೆಡುವಂತೆ ಶಿಕ್ಷಣ ಇಲಾಖೆಯು ಶಾಲೆಗಳಿಗೆ ನಿರ್ದೇಶಿಸಿತು. ಗಿಡಗಳನ್ನು ನೆಡುವ ವಿಷಯಕ್ಕೆ ಸಂಬಂಧಿಸಿದಂತೆ ಒಂದು ಸ್ವತಂತ್ರ ಸಂಸ್ಥೆ ಕೂಡ ಶಾಲೆಯನ್ನು ಸಂಪರ್ಕಿಸಿತು. ಆದರೆ ಕಳೆದ ವರ್ಷ ನೆಟ್ಟ ಗಿಡಗಳ ಅವಸ್ಥೆಯನ್ನು ನೋಡಿದ್ದ ಶಿಕ್ಷಕರಿಗೆ ಈ ಸಲ ಮಕ್ಕಳೊಡನೆ ಈ ಸಂಗತಿಯನ್ನು ಚರ್ಚಿಸಬೇಕು ಎನ್ನಿಸಿತು. ಮಕ್ಕಳು ಗಿಡಮರಗಳ ಜವಾಬ್ದಾರಿಯನ್ನು ಸಂಪೂರ್ಣ ರೀತಿಯಲ್ಲಿ ತೆಗೆದುಕೊಳ್ಳಲು ಸಿದ್ಧರಿದ್ದರೆ ಮಾತ್ರ ಸಸಿಗಳನ್ನು ನೆಡಬೇಕು ಎಂದುಕೊಂಡರು. ಆ ವೇಳೆಗೆ ಬಾಲ ಪಂಚಾಯತಿಯು ಕಾರ್ಯಾರಂಭ ಮಾಡಿತ್ತು. ಬಾಲ ಪಂಚಾಯಿತಿಗೆ ಚುನಾಯಿತರಾದ ಮಕ್ಕಳೊಡನೆ ಈ ವಿಷಯವನ್ನು ಚರ್ಚಿಸಲಾಯಿತು. ಮಕ್ಕಳು ಗಿಡಗಳನ್ನು ನೆಡುವ ಮತ್ತು ಅವುಗಳ ಪಾಲನೆ ಪೋಷಣೆ ಮಾಡುವ ಜವಾಬ್ದಾರಿಯನ್ನು ತೆಗೆದುಕೊಳ್ಳಲು ಒಪ್ಪಿದರು. ಈ ಸಂಬಂಧವಾಗಿ ಕೆಳಗಿನ ಅಂಶಗಳನ್ನು ಚರ್ಚಿಸಲಾಯಿತು: ಯಾವ ಗಿಡಗಳನ್ನು ನೆಡಬೇಕು? ಮಕ್ಕಳಿಗೆ ಇದಕ್ಕೆ ಉತ್ತರ ಗೊತ್ತಿತ್ತು. ಏಕೆಂದರೆ, ತಮ್ಮ ಸುತ್ತಮುತ್ತಲಿನ ಪರಿಸರದಲ್ಲಿ ಯಾವ ಮರಗಳು ಸುಲಭವಾಗಿ ಬೆಳೆಯುತ್ತವೆ ಎಂಬುದನ್ನು ಅವರು ನೋಡಿದ್ದರು ಮತ್ತು ಆಡು, ಕುರಿಗಳಂತಹ ಪ್ರಾಣಿಗಳು ತಿನ್ನದಂತಹ ಗಿಡಮರಗಳು ಯಾವುವು ಎಂಬುದು ಅವರಿಗೆ ತಿಳಿದಿತ್ತು. ಆಡು, ಮೇಕೆಗಳು ಸೀತಾಫಲದ ಗಿಡಗಳನ್ನು ತಿನ್ನುವುದಿಲ್ಲ ಎಂಬ ಸಂಗತಿಯನ್ನು ಮಕ್ಕಳು ಶಿಕ್ಷಕರಿಗೆ ಹೇಳಿದರು.

2. ಗಿಡಗಳಿಗೆ ಪ್ರತಿನಿತ್ಯ ಹಾಗೂ ರಜಾದಿನಗಳಲ್ಲಿ ನೀರುಣಿಸುವುದಕ್ಕಾಗಿ ಪ್ರತಿಯೊಂದು ತರಗತಿಯಿಂದ ಮಕ್ಕಳ ಒಂದು ತಂಡವನ್ನು ರಚಿಸಲಾಯಿತು. ಈ ಕೆಲಸದ ಜವಾಬ್ದಾರಿಯನ್ನು ಬಾಲ ಪಂಚಾಯಿತಿಯ ಪರಿಸರ ಪ್ರತಿನಿಧಿಗೆ ವಹಿಸಲಾಯಿತು.

೩. ಪ್ರಾಣಿಗಳಿಂದ ಗಿಡಗಳನ್ನು ರಕ್ಷಿಸುವುದಕ್ಕಾಗಿ ಬಿದಿರಿನ ಬೇಲಿಯ ವ್ಯವಸ್ಥೆಯನ್ನು ಮಾಡುವ ಹೊಣೆಯನ್ನು ಶಾಲೆಯ ಶಿಕ್ಷಕರು ತೆಗೆದುಕೊಂಡರು.

ಗಿಡಗಳನ್ನು ನೆಡುವ ಹಿಂದಿನ ದಿನ ಮಕ್ಕಳು ಗಿಡಗಳನ್ನು ನೆಡುವುದಕ್ಕಾಗಿ ತರಗತಿವಾರು ಜಾಗಗಳನ್ನು ನಿರ್ಧರಿಸಿದರು ಮತ್ತು ಅದಕ್ಕನುಗುಣವಾಗಿ ಗುಂಡಿಗಳನ್ನು ತೋಡಿದರು. ಶಾಲೆಯು ಗ್ರಾಮೀಣ ಭಾಗದಲ್ಲಿ ಇದ್ದ ಕಾರಣ, ಗುಂಡಿಯು ಎಷ್ಟು ಅಗಲ ಮತ್ತು ಆಳವಾಗಿರಬೇಕು ಎನ್ನುವುದು ಬಹುತೇಕ ಮಕ್ಕಳಿಗೆ ತಿಳಿದಿತ್ತು. ಶಾಲೆಯಲ್ಲಿ ಮಕ್ಕಳು ಸಸಿ ನೆಡುವ ಕಾರ್ಯಕ್ರಮವನ್ನು ನಡೆಸುತ್ತಿದ್ದಾರೆ ಎನ್ನುವುದು ಪೋಷಕರಿಗೆ ಕೂಡ ತಿಳಿದಿತ್ತು. ಅವರೂ ನೆರವಿಗೆ ಬಂದರು. ನಿಗದಿತ ದಿನದಂದು ಮಕ್ಕಳು ತಮ್ಮ ಆಯ್ಕೆಗೆ ಅನುಗುಣವಾಗಿ ಬೇವು, ಅರಳಿ (ಅಶ್ವತ್ಥ), ಪೇರಲೆ (ಸೀಬೆ), ನೇರಳೆ ಮತ್ತು ಸೀತಾಫಲದ ಗಿಡಗಳನ್ನು ನೆಟ್ಟರು. ಶಿಕ್ಷಕರು ಬೆಳಗಿನ ಸಭೆಯ ವೇಳೆ ಮತ್ತು ತರಗತಿಗಳಲ್ಲಿ ನಿರಂತರವಾಗಿ ಮರಗಳ ಕುರಿತು ಅನೌಪಚಾರಿಕ ರೀತಿಯಲ್ಲಿ ಮಾತನಾಡುತ್ತಲೇ ಇದ್ದರು. ಮಕ್ಕಳು ಕೂಡ ಬಹಳ ಜಾಗರೂಕರಾಗಿದ್ದರು. ಅವರು ಗಿಡಗಳಿಗೆ ನೀರು ಹಾಕಲೆಂದೇ ಶಾಲೆಗೆ ಅರ್ಧಗಂಟೆ ಮುಂಚಿತವಾಗಿ ಕೂಡ ಬರತೊಡಗಿದರು. ಒಂದೊಮ್ಮೆ ಗಿಡಗಳಿಗೆ ನೀರು ಹಾಕಲು ಬೇಕಾದ ಬಕೆಟ್ ಮುಂತಾದ ಯಾವುದೇ ಸಾಮಗ್ರಿಯ ಕೊರತೆಯಿದ್ದಲ್ಲಿ ಅವರು ಅದನ್ನು ತಮ್ಮ ಮನೆಗಳಿಂದಲೇ ತರುತ್ತಿದ್ದರು. ಅವರು ಪ್ರತಿದಿನ ಗಿಡಗಳ ಬೆಳವಣಿಗೆಯನ್ನು ತೀವ್ರ ಆಸಕ್ತಿಯಿಂದ ಗಮನಿಸುತ್ತಿದ್ದರು. ಅವರು ಗೊಬ್ಬರವನ್ನು ತಂದರು, ಬೇಲಿಯನ್ನು ಅಗತ್ಯಕ್ಕೆ ತಕ್ಕಂತೆ ಹೊಂದಿಸಿದರು. ಈ ರೀತಿಯಾಗಿ ಆರಂಭವಾದ ಗಿಡಮರಗಳೊಂದಿಗಿನ ಅವರ ಬಾಂಧವ್ಯ ಹಾಗೂ ಅವುಗಳ ರಕ್ಷಣೆಯ ಕುರಿತ ಕಾಳಜಿ ಬೆಳೆಯತೊಡಗಿತು.

## ಉತ್ತಮ ಕಾರ್ಯವನ್ನು ಮುಂದುವರೆಸಿದ್ದು

ಈ ಕೆಲಸವು ರಜೆಯ ದಿನಗಳಲ್ಲಿಯೂ ಮುಂದುವರೆಯಿತು. ಆದರೆ ಆರು ವಾರಗಳಷ್ಟು ಸುದೀರ್ಘವಾದ ಬೇಸಿಗೆ ರಜೆಯಲ್ಲಿ ಮಕ್ಕಳು ನೆಂಟರಿಷ್ಟರ ಮನೆಗೆ ಹೋಗುವುದರಿಂದ ಗಿಡಗಳ ಅವಸ್ಥೆ ಏನಾಗಬಹುದು ಎಂದು ಶಿಕ್ಷಕರು ಚಿಂತಿತರಾಗಿದ್ದರು. ಈ ವಿಷಯವನ್ನು ಮಕ್ಕಳೊಡನೆ ಚರ್ಚಿಸಲಾಯಿತು. ಅವರು ಅದಕ್ಕೊಂದು ಪರಿಹಾರವನ್ನು ಕಂಡುಹಿಡಿದರು. ಎಲ್ಲಿಗೂ ಹೋಗದ ಕೆಲವು ಮಕ್ಕಳು ತರಗತಿಯಲ್ಲಿದ್ದರು. ಅವರು ಗಿಡಗಳನ್ನು ನೋಡಿಕೊಳ್ಳಲು ಸಿದ್ಧರಿದ್ದರು. ಪ್ರತಿಯೊಬ್ಬರೂ ಬೇರೆಬೇರೆ ಸಮಯದಲ್ಲಿ ಹೋಗುವುದರಿಂದ, ತಾವು ಸರದಿಯ ಪ್ರಕಾರ ಗಿಡಗಳಿಗೆ ನೀರು ಹಾಕುವ ಕೆಲಸವನ್ನು ಮಾಡುತ್ತೇವೆ ಎಂದು ಕೂಡ ಮಕ್ಕಳು ಹೇಳಿದರು. ಅದರ ಫಲವಾಗಿ, ಅತ್ಯಂತ ಕಷ್ಟದ ಸಮಯದಲ್ಲಿ ಅಂದರೆ ಗಿಡಗಳಿಗೆ ನೀರು ಅತ್ಯಗತ್ಯವಾಗಿ ಬೇಕಿದ್ದ ವೇಳೆಯಲ್ಲಿ ನೀರುಣಿಸಿ, ಮಕ್ಕಳು ಅವುಗಳನ್ನು ಜೀವಂತವಾಗಿಟ್ಟರು. ಈ ರೀತಿಯಾಗಿ, ಯಾವುದೇ ಔಪಚಾರಿಕ ಬೋಧನೆಯಿಲ್ಲದೆಯೇ ಮಕ್ಕಳಲ್ಲಿ ಪರಿಸರ ಶಿಕ್ಷಣದ ಬಗ್ಗೆ ಆಸಕ್ತಿಯನ್ನು ಬೆಳೆಸಲಾಯಿತು. ಮುಂದಿನ ಮಳೆಗಾಲದಲ್ಲಿ, ಈ ಕಾರ್ಯಕ್ರಮವನ್ನು ಮತ್ತಷ್ಟು ವಿಸ್ತರಿಸಲಾಯಿತು. ಮಕ್ಕಳೊಡನೆ ಮಾತನಾಡಿದ ನಂತರದಲ್ಲಿ, ಶಾಲೆಯ ಸಮೀಪ ಇರುವ ಗುಡ್ಡದ ಸುತ್ತಮುತ್ತ ಮತ್ತು ವಿದ್ಯಾರ್ಥಿಗಳ ಮನೆಯ ಆವರಣದಲ್ಲಿಯೂ ಗಿಡಗಳನ್ನು ನೆಡುವುದೆಂದು ನಿರ್ಧರಿಸಲಾಯಿತು. ಮಕ್ಕಳು ತುಂಬಾ ಉತ್ಸುಕರಾಗಿದ್ದರು. ಆದರೆ ಗಿಡಗಳನ್ನು ಪ್ರಾಣಿಗಳಿಂದ ಕಾಪಾಡಿಕೊಳ್ಳುವ ಸವಾಲು ಇತ್ತು ಹಾಗೂ ಗುಡ್ಡದ ಮೇಲೆ ನೀರು ಸಿಗದಿರುವ ಸಮಸ್ಯೆಯೂ ಇತ್ತು. ಎಲ್ಲರ ಮನೆಗಳಲ್ಲಿಯೂ ಎತ್ತು, ಎಮ್ಮೆ, ಹಸು, ಆಡು ಇತ್ಯಾದಿಗಳಿದ್ದ ಕಾರಣ, ಮನೆಗಳ ಬಳಿ ಗಿಡಗಳನ್ನು ನೆಡುವುದಕ್ಕೂ ಮೊದಲು ಇಡೀ ಕುಟುಂಬದ ಜೊತೆ ಮಾತನಾಡಬೇಕೆಂದು ನಿರ್ಧರಿಸಲಾಯಿತು. ಶಾಲೆಯಲ್ಲಿ ಗಿಡಗಳನ್ನು ನೆಡುವ ಪ್ರಯೋಗವು ಯಶಸ್ವಿಯಾಗಿತ್ತು. ಆದ್ದರಿಂದ ಹಳ್ಳಿಗರು ಕೂಡ ತಮ್ಮ ಮನೆಗಳ ಸುತ್ತ ಗಿಡಗಳನ್ನು ನೆಡಲು ಸಿದ್ಧರಿದ್ದರು. ಗಿಡಗಳಿಗೆ ನೀರುಣಿಸುವ ಮತ್ತು ಅವುಗಳನ್ನು ನೋಡಿಕೊಳ್ಳುವ ಜವಾಬ್ದಾರಿಯನ್ನು ಮಕ್ಕಳು ತೆಗೆದುಕೊಂಡರು. ನಂತರ, ಅರಣ್ಯ ಇಲಾಖೆ ಮತ್ತು ಸ್ಥಳೀಯ, ಸ್ವತಂತ್ರ ಸಂಘಟನೆಯೊಂದರ ಸಹಾಯದಿಂದ ಗಿಡಗಳನ್ನು ನೆಡಲಾಯಿತು. ಗುಡ್ಡದ ಮೇಲೆ ಸೀತಾಫಲದ ಗಿಡಗಳನ್ನು ನೆಡುವುದೆಂದು ತೀರ್ಮಾನಿಸಲಾಯಿತು. ಏಕೆಂದರೆ, ಈ ಮೊದಲೇ ಹೇಳಿದ ಹಾಗೆ ಆಡುಗಳು ಅವುಗಳನ್ನು ತಿನ್ನುವುದಿಲ್ಲ. ನೀರು ಪೂರೈಕೆಗಾಗಿ, ಗುಡ್ಡದ ಮೇಲಿನ ದೇವಸ್ಥಾನದ ಬಳಿ ಇರುವ ಕೈಪಂಪ್ ಅನ್ನು ಪಂಚಾಯಿತಿಯ ನೆರವಿನಿಂದ ದುರಸ್ತಿ ಮಾಡಲಾಯಿತು. ಮಕ್ಕಳು ಈ ಗಿಡಗಳ ಜವಾಬ್ದಾರಿಯನ್ನು ಸಹ ತೆಗೆದುಕೊಂಡರು.

ಶಿಕ್ಷಕರು, ಮಕ್ಕಳು ಮತ್ತು ಪೋಷಕರೂ ಕೂಡ ಪಾಲ್ಗೊಂಡು ಈ ಚಟುವಟಿಕೆಯು ಯಾವ ಅಡೆತಡೆಯೂ ಇಲ್ಲದೇ ಸಾಗಿತು. ಮೊದಲು ಕೇವಲ ಶಿಕ್ಷಕರಷ್ಟೇ ಮರಗಿಡಗಳ ಬಗ್ಗೆ, ಅವುಗಳ ಸಂರಕ್ಷಣೆ ಮತ್ತು ಪ್ರಯೋಜನಗಳ ಬಗ್ಗೆ ತರಗತಿಯಲ್ಲಿ ಮಾತನಾಡುತ್ತಿದ್ದರು. ಆದರೆ ಈಗ ಮಕ್ಕಳು ಮತ್ತು ಅವರ ಕುಟುಂಬಗಳು ಕೂಡ ಈ ಚಟುವಟಿಕೆಗಳಲ್ಲಿ ಸಂಪೂರ್ಣವಾಗಿ ತೊಡಗಿಸಿಕೊಂಡಿದ್ದಾರೆ.

## ಕೋವಿಡ್-19ರ ಪರಿಣಾಮ

ಆದರೆ ಯಾರ ನಿಯಂತ್ರಣದಲ್ಲಿಯೂ ಇರದ ಸನ್ನಿವೇಶಗಳ ಕಾರಣ ಮತ್ತೊಂದು ಸವಾಲು ಉದ್ಭವಿಸುವುದಿತ್ತು. ಅದು, ಕೋವಿಡ್‌ಎಂಬ ಸಾಂಕ್ರಾಮಿಕ ಪಿಡುಗು. ಕೋವಿಡ್ನ ಸಮಯದಲ್ಲಿ ಯಾರೊಬ್ಬರೂ ಮನೆಯಿಂದ ಹೊರಬರುತ್ತಿರಲಿಲ್ಲ. ಮನೆಯ ಸುತ್ತಮುತ್ತ ಇದ್ದ ಗಿಡಗಳು ಸುರಕ್ಷಿತವಾಗಿದ್ದವು. ಆದರೆ ಶಾಲೆಯ ಆವರಣದಲ್ಲಿದ್ದ ಮತ್ತು ಗುಡ್ಡದ ಮೇಲಿದ್ದ ಗಿಡಗಳು ನೀರು ಮತ್ತು ಕಾಳಜಿಯ ಕೊರತೆಯಿಂದಾಗಿ ಒಣಗಿಹೋದವು.

ಆದಾಗ್ಯೂ ಯಾವುದೇ ಒಂದು ಚಟುವಟಿಕೆಯಲ್ಲಿ ಮಕ್ಕಳು ಸಂಪೂರ್ಣವಾಗಿ ಭಾಗವಹಿಸಿದರೆ, ಮಕ್ಕಳಿಗೆ ತೀರ್ಮಾನ

ತೆಗೆದುಕೊಳ್ಳುವ ಹಕ್ಕನ್ನು ನೀಡಿದರೆ ಮತ್ತು ಅವರ ತೀರ್ಮಾನಗಳನ್ನು ಗೌರವಿಸಿದರೆ, ಮಕ್ಕಳು ಪರಿಸರ ಸಂಬಂಧೀ ಮಾತುಕತೆಗಳನ್ನು ಸುಲಭವಾಗಿ ಅರ್ಥಮಾಡಿಕೊಳ್ಳುತ್ತಾರೆ ಮತ್ತು ಅವುಗಳಲ್ಲಿ ತೊಡಗಿಕೊಳ್ಳುತ್ತಾರೆ ಎಂಬ ವಿಷಯ ಈ ಇಡೀ ಪ್ರಕ್ರಿಯೆಯ ಅವಧಿಯಲ್ಲಿ ಸ್ಪಷ್ಟವಾಯಿತು.

---



**ಶುಚಿ ದುಬೆ** ಅವರು ಇಂದೋರ್‌ನ ದೇವಿ ಅಹಲ್ಯಾಬಾಯಿ ಹೋಳ್ಕರ್ ವಿಶ್ವವಿದ್ಯಾನಿಲಯದಿಂದ ಡಿಜಿಟಲ್ ಇನ್ಸ್ಟ್ರುಮೆಂಟೇಷನ್ ವಿಷಯದಲ್ಲಿ ಎಮ್‌ಇ ಪದವಿಯನ್ನು ಪಡೆದಿದ್ದಾರೆ. ಅಜೀಂ ಪ್ರೇಮ್‌ಜಿ ಫೌಂಡೇಷನ್‌ನ ಫೆಲೋಶಿಪ್ ಕಾರ್ಯಕ್ರಮದಲ್ಲಿ ಕೆಲಸ ಮಾಡುವ ಅವಧಿಯಲ್ಲಿ ಗಣಿತ ವಿಷಯವನ್ನು ಅರ್ಥ ಮಾಡಿಕೊಳ್ಳುವುದಕ್ಕೆ ಸಂಬಂಧಿಸಿದಂತೆ ಇವರು ರಾಜಸ್ಥಾನ ತಂಡದ ಭಾಗವಾಗಿ, ಶಿಕ್ಷಕರ ಸಾಮರ್ಥ್ಯಾಭಿವೃದ್ಧಿ ಕಾರ್ಯದಲ್ಲಿ ತೊಡಗಿಕೊಂಡಿದ್ದರು. ಪ್ರಸ್ತುತ ಇವರು ರಾಜಸ್ಥಾನದ ಸಿರೋಹಿಯಲ್ಲಿರುವ ಅಜೀಂ ಪ್ರೇಮ್‌ಜಿ ಫೌಂಡೇಷನ್‌ನ ಜಿಲ್ಲಾ ಸಂಸ್ಥೆಯಲ್ಲಿ ಆರಂಭಿಕ ಬಾಲ್ಯದ ಆರೈಕೆ ಮತ್ತು ಶಿಕ್ಷಣಕ್ಕೆ (ECCE-Early Childhood care Education) ಸಂಬಂಧಿಸಿದಂತೆ ಸಂಪನ್ಮೂಲ ವ್ಯಕ್ತಿಯಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಇವರಿಗೆ ಚಿತ್ರಬಿಡಿಸುವುದು ಮತ್ತು ಮಕ್ಕಳಿಗೆ ಕಥೆ ಹೇಳುವುದೆಂದರೆ ತುಂಬಾ ಇಷ್ಟ. ಅವರನ್ನು suchi.dubay@azimpremjifoundation.org ಮೂಲಕ ಸಂಪರ್ಕಿಸಬಹುದು.

---

ಅನುವಾದ: **ಸಹನಾ ಹೆಗಡೆ** | ಪರಿಶೀಲನೆ: **ನಾಗಮಣಿ ಎಸ್.ಎನ್.**